ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:28–02–2014ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/338/2013–14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ವಾರ್ಡ್–08ರ ಕೊಡಿಗೆಹಳ್ಳಿಯಲ್ಲಿ ಈ ಕೆಳಗೆ ನಮೂದಿಸಿರುವ 4 ಕಾಮಗಾರಿಗಳನ್ನು 2013–14ನೇ ಸಾಲಿನಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಗಳನ್ನು ಪೂಜ್ಯ ಮಹಪೌರರು ಅನುದಾದಡಿಯಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಗಳಿಗೆ ಪೂಜ್ಯ ಮಹಾಪೌರರು ಅವರ ಪತ್ರದ ಸಂಖ್ಯೆ:ಎಂಪಿಎಸ್/ಪಿಎಸ್/ಮಾವಿಕಾ/99/2013–14 ದಿನಾಂಕ:6/2/2014ರಂದು ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ ಹಾಗೂ ಸದರಿ ಕಾಮಗಾರಿಗಳನ್ನು ನಿಯಮಾನುಸಾರ ಕೆ.ಆರ್.ಐ.ಡಿ.ಎಲ್ ಮುಖಾಂತರ ನಿರ್ವಹಿಸಲು ಕೂಡ ಸೂಚಿಸಿರುತ್ತಾರೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ. ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	**Improvements to roads and drains at Kodigehallil village and Kodigehalli layout in ward No.8 Kodigehalli**	**50.00**
2	**Improvements to roads and drains at Amco layout Hebal sarvor and Balaji layout in ward No.8 Kodigehalli**	**50.00**
3	**Improvements to roads and drains at Devinagara, Munieshwara block, Tatanagara and Knnuramma temple in ward No.8 Kodigehalli**	**50.00**
4	**Improvements to roads and drains at Maruthinagara, BB layout Bhadrappa layout in ward No.8 Kodigehalli**	**50.00**

ಕಾಮಗಾರಿಗಳ ಪಟ್ಟಿಯನ್ನು ಪರಾಮರ್ಶಿಸಿದಾಗ ಈ ಕಾಮಗಾರಿಯು ತುರ್ತು ಎಂದು ಪರಿಗಣಿಸಲು ಕಷ್ಟಸಾಧ್ಯವಾಗಿರುತ್ತದೆ. ಅಲ್ಲದೇ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಮುಖ್ಯ ಅಭಿಯಂತರರು, ಜಂಟಿ ಆಯುಕ್ತರು (ಯಲಹಂಕ) ರವರು ಸಮರ್ಥನೀಯವಾದ ಕಾರಣಗಳನ್ನು ನೀಡಿರುವುದಿಲ್ಲ. ಮಂಜೂರಾದ ಹೆಚ್ಚಿನ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್.ಗೆ ವಹಿಸುವ ಬಗ್ಗೆ ಎಲ್ಲಾ ವಲಯಗಳಿಂದ

ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಆದರೆ, ಈಗಾಗಲೇ ಮೆ॥ ಕೆ.ಆರ್.ಐ.ಡಿ.ಎಲ್.ಗೆ ವಹಿಸಿರುವ ಕಾಮಗಾರಿಗಳನ್ನು ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಮಾಹಿತಿ ಇರುವುದಿಲ್ಲ.

ಆದುದರಿಂದ ಮಾನ್ಯ ಆಯುಕ್ತರು ಈ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26/02/2014ರ ಟಿಪ್ಪಣಿ

ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26/02/2014 ರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ರಸ್ತಾಪಿತ ಕಾಮಗಾರಿಗಳನ್ನು ಈ ಆರ್ಥಿಕ ವರ್ಷ ಮುಕ್ತಾಯವಾಗುವ ಮೊದಲು ಹಾಗೂ ಮಳೆಗಾಲಕ್ಕೂ ಮುನ್ನ ಪ್ರಾರಂಭ ಮಾಡಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ವಹಿಸಲು ಅನುಮೋದನೆ ನೀಡುವಂತೆ ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುವುದರಿಂದ, ಪ್ರಸ್ತಾಪಿತ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಎ.ಹೆಚ್.ಬಸವರಾಜು
ಅಧ್ಯಕ್ಷರು
ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
~~ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.~~

ಕ್ರಮ ಸಂಖ್ಯೆ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಎ.ಹೆಚ್.ಬಸವರಾಜು	ಅಧ್ಯಕ್ಷರು	ಎ.ಹೆಚ್.ಬಸವರಾಜು
2	ರಂಗಣ್ಣ. ಕೆ	ಸದಸ್ಯರು	K. Rangamma
3	ಸುಗುಣ ಬಾಲಕೃಷ್ಣ	ಸದಸ್ಯರು	SugunaBalakrishna
4	ತಿಮ್ಮರಾಜು	ಸದಸ್ಯರು	
5	ಸರಸ್ವತಮ್ಮ	ಸದಸ್ಯರು	Saraswathamma
6	ಕೆ. ನಂದಿನಿ ಶ್ರೀನಿವಾಸ್	ಸದಸ್ಯರು	K. Nandini
7	ಆಶಾ ಸುರೇಶ್	ಸದಸ್ಯರು	
8	ಎಸ್.ಕೆ.ಪುಷ್ಪ	ಸದಸ್ಯರು	

9	ಶಾಹಿನ್ ತಾಜ್	ಸದಸ್ಯರು	
10	ಜ್ಯೋತಿಶ್ರೀ ಹರಿರೆಡ್ಡಿ	ಸದಸ್ಯರು	
11	ಅಶ್ವಥ ನಾರಾಯಣ ಜಿ.ಎ	ಸದಸ್ಯರು	